**ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 02–07–2024 ರಂದು ಬೊಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಜಿ ಎಸ್ ಹೆಚ್ ನ್ಯಾಯವಾದಿರವರಿಂದಃ**

ಸಾಕ್ಷಿಯು ದಿಃ 15–04–2002 ರ ವಿಭಾಗ ಪತ್ರದ ನೋಟರೈಸಡ್ ಪ್ರತಿಯನ್ನು ಹಾಜರುಪಡಿಸುತ್ತಿದ್ದು, ಅದನ್ನು ಮೂಲ ದಾಖಲಾತಿಯೊಂದಿಗೆ ಹೋಲಿಕೆ ಮಾಡಿ ನೋಡಲಾಗಿ ಅದು ಸರಿ ಇದ್ದು, ಅದನ್ನು ನಿಪಿ–32 ಎಂದು ಗುರುತಿಸಲಾಯಿತು . ಮೂಲ ದಾಖಲಾತಿಯನ್ನು ಸಾಕ್ಷಿಗೆ ಹಿಂದಿರುಗಿಸಲಾಗಿದೆ ಸಾಕ್ಷಿಯು ಬಿಳಗಿ ಗ್ರಾಮದ ಗ್ರಾಮ ನಕಾಶೆಯ ದೃಢಿಕೃತ ನಕಲನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ–33 ಎಂದು ಗುರುತಿಸಲಾಯಿತು . ಸಾಕ್ಷಿಯು ದಾವಾ ಆಸ್ತಿಗೆ ಸಂಬಂಧಪಟ್ಟ ನಕಾಶೆಯ ದೃಢಿಕೃತ ನಕಲನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ–34 ಎಂದು ಗುರುತಿಸಲಾಯಿತು . ಸಾಕ್ಷಿಯು ಕರ್ನಾಟಕ ಲೋಕಾಯುಕ್ತ ಅವರು ನೀಡಿದ ದಿಃ 06–02–2023 ರ ನೋಟಿಸ್ ಹಾಗೂ ತನಿಖಾ ವರದಿಯನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ಒಟ್ಟಾಗಿ ನಿಪಿ–35 ಎಂದು ಗುರುತಿಸಲಾಯಿತು . ಸಾಕ್ಷಿಯು ದಿಃ 29–04–2024 ರಂದು ಬಿಳಗಿ ಗ್ರಾಮ ಪಂಚಾಯತ್ ಅವರು 1 ನೇ ಪ್ರತಿವಾದಿಗೆ ನೀಡಿದ ಪತ್ರದ ದೃಢಿಕೃತ ನಕಲನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ–36 ಎಂದು ಗುರುತಿಸಲಾಯಿತು . ಸಾಕ್ಷಿಯು ದಿಃ 29–05–2024 ರಂದು ಬಿಳಗಿ ಗ್ರಾಮ ಪಂಚಾಯತ್ ಅವರು 1 ನೇ ಪ್ರತಿವಾದಿಗೆ ನೀಡಿದ ಪತ್ರದ ದೃಢಿಕೃತ ನಕಲನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ–37 ಎಂದು ಗುರುತಿಸಲಾಯಿತು . ಸಾಕ್ಷಿಯು ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ಅವರು ನೀಡಿದ ಪತ್ರವನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ–38 ಎಂದು ಗುರುತಿಸಲಾಯಿತು . ಸಾಕ್ಷಿಯು 6 ಭಾವ ಚಿತ್ರಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ 39 ರಿಂದ 44 ಎಂದು , ಹಾಗೂ ಒಂದು ಸಿಡಿಯನ್ನು ನಿಪಿ–45 ಎಂದು ಗುರುತಿಸಲಾಯಿತು .

**ಈ ಹಂತದಲ್ಲಿ ಪ್ರತಿವಾದಿ ಪರ ನ್ಯಾಯೂವಾದಿರವರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಕಾಲಾವಕಾಶ ನೀಡಿ ಮುಂದೂಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ,**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**